


ಕನ್ನಡಿಗರ ಉದ್ಯೋಗದ ಹಕ್ಕಿಗಾಗಿ ಉಪವಾಸ ಸತ್ಯಾಗ್ರಹ

# ಹೀಗೊಂದು ಕನ್ನಡದ ಹೋರಾಟ!

**ಜಾಗತಿಕ ಗ್ರಾಮ ಕಲ್ಪನೆಯಿಂದ ಉಂಟಾಗಿರುವ ವಲಸೆ, ಮೂಲಕ್ಕೆ ಮೂಲವಾಗುತ್ತಿದೆ. ತಾಯಿ ನಾಡಿನಲ್ಲಿ ನೆಲದ ಮಕ್ಕಳೇ ಅನಾಥರಾಗುತ್ತಿದ್ದಾರೆ. ದುಡಿಮೆಯ ನಂಬಿ ಬದುಕು ರೂಪಿಸಿಕೊಳ್ಳಬೇಕಾದ ಸ್ಥಳೀಯರು ಉದ್ಯೋಗದಾತರ ಮುಂದೆ ಪರಕೀಯರಾಗುತ್ತಿದ್ದಾರೆ. ಕಡಿಮೆ ಸಂಬಳಕ್ಕೆ– ಹೆಚ್ಚಿನ ಶ್ರಮ ತೆಗೆಯುವ ನವವಸಾಹತು ಕಾಲ ಆರಂಭವಾಗಿದೆ. ಇಲ್ಲಿ ಭಾಷಾ ಚಳವಳಿ ರೂಪಿಸುವುದು ಹೇಗೆ?**

★ ರಾಘವೇಂದ್ರ ಕೆ.

ಭಾಷಾವಾರು ಪ್ರಾಂತ್ಯಗಳಲ್ಲಿ ರಾಜ್ಯಭಾಷೆಯ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ ನಡೆದ ಹೋರಾಟಕ್ಕೆ ದೀರ್ಘ ಇತಿಹಾಸವಿದೆ. ಅದರಲ್ಲಿ ಕನ್ನಡಿಗರ ಉದ್ಯೋಗಕ್ಕೆ ಸಂಬಂಧಿಸಿದಂತೆ ಡಾ.ಸರೋಜಿನಿ ಮಹಿಷಿ ಅವರ ಅಧ್ಯಕ್ಷತೆಯಲ್ಲಿ ರಚನೆಗೊಂಡ ಸಮಿತಿಯ ಚಳವಳಿ ಕೂಡ ಒಂದು ಅಧ್ಯಾಯ. ಮಹಿಷಿ ಅವರ ಸಮಿತಿ ಪ್ರಾದೇಶಿಕ ಪ್ರಾಶಸ್ತ್ಯದ ಅನಿವಾರ್ಯತೆಯನ್ನು ಗುರುತಿಸಿದ ವರದಿಯನ್ನು 1986ರಲ್ಲಿ ಸರ್ಕಾರಕ್ಕೆ ಸಲ್ಲಿಸುತ್ತದೆ. ರಾಜ್ಯದ ಭೂಭಾಗದೊಳಗೆ ಕಾರ್ಯನಿರ್ವಹಿಸುವ ಸರ್ಕಾರಿ, ಅರೆಸರ್ಕಾರಿ, ಖಾಸಗಿ ಹಾಗೂ ಸಾರ್ವಜನಿಕ ಸಂಸ್ಥೆಗಳಲ್ಲಿ ಎ ಶ್ರೇಣಿ ಅಧಿಕಾರಿಗಳಲ್ಲಿ ಕನ್ನಡಿಗರು ಶೇ.65ರಷ್ಟು ಇರಬೇಕು. ಬಿ ಶ್ರೇಣಿಯಲ್ಲಿ ಶೇ.80, ಸಿ ಮತ್ತು ಡಿ ಶ್ರೇಣಿಗೆ 100ಕ್ಕೆ 100ರಷ್ಟು ಕನ್ನಡಿಗರನ್ನೇ ನೇಮಿಸಬೇಕು ಎಂದು ಹೇಳುತ್ತದೆ. ಸರ್ಕಾರ ಅದನ್ನು ತಾತ್ವಿಕವಾಗಿ ಒಪ್ಪಿಕೊಂಡಿದ್ದರೂ, ಈ ಕ್ಷಣದವರೆಗೂ ಅದು ಅನುಷ್ಠಾನಗೊಂಡಿಲ್ಲ.

'ಇತ್ತೀಚೆಗೆ ವಲಸೆಯ ಪ್ರಮಾಣ ಬೇರೆಲ್ಲಾ ರಾಜ್ಯಗಳಿಗಿಂತ ಕರ್ನಾಟಕದಲ್ಲಿ ಹೆಚ್ಚಿದೆ. ಇಂದಿನ ಖಾಸಗಿ ಉದ್ಯಮಗಳೂ ಕೂಡ ಸ್ಥಳೀಯರಿಗಿಂತ ಹೊರಗಿನವರಿಗೆ ಆದ್ಯತೆಯನ್ನು ಕೊಡುತ್ತಿವೆ. ಇದು ಹೀಗೆ ಮುಂದುವರಿದರೆ ರಾಜ್ಯದಲ್ಲಿ ಕನ್ನಡಿಗರೇ ಪರದೇಶಿಗಳಾಗಬೇಕಾಗುತ್ತದೆ' ಎಂದು ಕನ್ನಡಿಗರ ಉದ್ಯೋಗ ವೇದಿಕೆಯ ಅಧ್ಯಕ್ಷೆ ವಿನುತಾ ಆತಂಕ ವ್ಯಕ್ತಪಡಿಸುತ್ತಾರೆ.

ಕರ್ನಾಟಕದಲ್ಲಿ ನೌಕರಿ– ಚಾಕರಿಗಳು ಕನ್ನಡಿಗನಿಗೆ ಆದ್ಯತೆಯ ಮೇಲೆ ಸಿಗಬೇಕು. ಇದು ನ್ಯಾಯೋಚಿತ ಎನ್ನುವ ಬೇಡಿಕೆಯನ್ನು 'ಕನ್ನಡಿಗರ ಉದ್ಯೋಗ ವೇದಿಕೆ' ಹೈಕೋರ್ಟ್ ಮುಂದಿಟ್ಟಿದೆ. ಅದಕ್ಕೆ ಪೂರಕವಾಗಿ ಎಸ್.ಎಮ್. ಎಸ್. ಅಭಿಯಾನವನ್ನು ಮಾಡಿದೆ. ಅದನ್ನು ಆನ್‌ಲೈನ್ ಮೂಲಕ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಎಂದು ಹೈಕೋರ್ಟ್‌ಗೆ ಸಲ್ಲಿಸಿತ್ತು. ಸಾಫ್ಟ್‌ವೇರ್ ಎಂಜಿನಿಯರ್‌ಗಳಿಂದ ಹಿಡಿದು ವಿವಿಧ ಕ್ಷೇತ್ರದ ತಂತ್ರಜ್ಞರು, ಪರಿಣಿತರು, ವಿದ್ಯಾರ್ಥಿಗಳು, ನಿರುದ್ಯೋಗಿಗಳು ಸೇರಿ ಮೂರು ಲಕ್ಷ ಮಂದಿ ಆ ಮನವಿಗೆ

44 ನೇ ಪುಟ ನೋಡಿ